# ಫೇಕ್‌ನ್ಯೂಸ್ ಕಿಡಿ; ಕೇಡಿಗೆ ಮುನ್ನುಡಿ




ಇದು ಮಾಹಿತಿ ಯುಗ. ದಿನ ಬೆಳಗಾದರೆ ನೂರಾರು ಹೊಸ ಸುದ್ದಿಗಳು ಕಣ್ಣಿಗೆ ಕಾಣುತ್ತವೆ, ಕಿವಿಗೆ ಬೀಳುತ್ತವೆ. ಇವುಗಳ ನಡುವೆ ಕೆಲವು ಸುಳ್ಳುಸುದ್ದಿಗಳೂ ಸೇರಿಕೊಂಡುಬಿಡುತ್ತವೆ. ಇಂಥವು ಜನರಲ್ಲಿ ಗೊಂದಲವನ್ನು ಹುಟ್ಟಿಸುತ್ತವೆ. ಇಡೀ ಸುದ್ದಿ ಮಾಧ್ಯಮಗಳ ಚರಿತ್ರೆಯಲ್ಲಿಯೇ 21ನೇ ಶತಮಾನ ಅತಿಹೆಚ್ಚು 'ಸುಳ್ಳುಸುದ್ದಿ'ಗಳನ್ನು ಹಬ್ಬಿಸಿದ ಶತಮಾನವಾಗಿದೆ. ಇದೇ ಕಾರಣಕ್ಕೆ ಕೆಲವು ಸುದ್ದಿ ಮಾಧ್ಯಮಗಳಲ್ಲಿ 'ಸುಳ್ಳುಸುದ್ದಿ'ಯೇ 'ಸುದ್ದಿ'ಯಾಗಿಬಿಟ್ಟಿದೆ.

ಮುದ್ರಣ ಮಾಧ್ಯಮ, ಅಂತರ್ಜಾಲ, ಸಾಮಾಜಿಕ ಜಾಲತಾಣಗಳು, ಸ್ಮಾರ್ಟ್‌ಫೋನ್‌ಗಳ ಮೂಲಕ ಪ್ರತಿಕ್ಷಣ ಸುದ್ದಿಗಳ ಮಹಾಪೂರವೇ ಹರಿದುಬರುತ್ತಿರುವ ಈ ಕಾಲದಲ್ಲಿ 'ಸುಳ್ಳುಸುದ್ದಿ'ಗಳ ಕಾಟವೂ ಹೆಚ್ಚುತ್ತಿದೆ. ಹಾಗಾಗಿ ಸುಳ್ಳುಸುದ್ದಿಗಳ ಅಸಲು ಚರಿತ್ರೆಯನ್ನು ವಿಶ್ಲೇಷಣಾತ್ಮಕವಾಗಿ ನೋಡುವುದು, ಗುರುತಿಸುವುದು ಮತ್ತು ಅವುಗಳಿಂದ ನಮ್ಮನ್ನು ನಾವು ಭಾವಾನಾತ್ಮಕವಾಗಿ, ಬೌದ್ಧಿಕವಾಗಿ ಮತ್ತು ಭೌತಿಕವಾಗಿ ರಕ್ಷಿಸಿಕೊಳ್ಳುವುದು ಎಂದಿಗಿಂತ ಹೆಚ್ಚಿನ ಜರೂರಾಗಿದೆ.

ಬಹುಶಃ 'ಸುಳ್ಳು' ಎನ್ನುವುದು ಮನುಷ್ಯನಷ್ಟೇ ಹಳೆಯದೇನೋ. ಸುಳ್ಳು ಹೇಳುವುದು ಎಂದಿನಿಂದಲೂ ನಡೆದುಬಂದಿರುವ ಆಚಾರ. ಆದರೆ ಬರಿಯ ಬಾಯಿಮಾತಿನಲ್ಲಿ ಕೆಲವೇ ಜನರ ನಡುವೆ ಹರಡುತ್ತಿದ್ದ ಸುಳ್ಳು ಸುದ್ದಿಗಳು ಇದೀಗ ಕ್ಷಣಾರ್ಧದಲ್ಲಿ ಜಗತ್ತನ್ನೇ ವ್ಯಾಪಿಸಬಲ್ಲವು.

